ಬೊಮ್ಮಣಿ ಗ್ರಾಮ ಪಂಚಾಯತಿಗೆ ಅಧ್ಯಕ್ಷನಾದಾಗ ಟಾರ ಹೊದ್ದು ಜನರಿಗೆ ಕೊಂಚ ಅನುಕೂಲವಾಗಿದೆ. ಬೆಟ್ಟದ ಬುಡಕ್ಕೆ ಇದ್ದ ಊರಾದ ಕಾರಣವ್ರೋ ಚಳಿಗಾಲದಲ್ಲಿ ನಡುಕ ಹುಟ್ಟಿಸುವ ಚಳಿ ಇರುತ್ತದೆ. ಮಳೆಗಾಲದಲ್ಲಿ ಕೆರೆ ತುಂಬಿ ಹರಿಯುವ ನೀರಿನಿಂದ ಮನೆಗಳ ನಡುವೆಯೆ ನುಸುಳುವ ಕಿರು ತೊರೆಗಳ ಕಾರಣವ್ರೋ ಚಳಿ ಕೊಂಚ ಹೆಚ್ಚು.

ಆಗಾಗ ಕಂಚಿನ ಬೈಲಿನಲ್ಲಿ ನಡು ಮಧ್ಯಾಹ್ನದ ಹೊತ್ತೋ ಇಲ್ಲವೇ ಸಂಜೆಯ ಹೊತ್ತೋ ಹೆಂಗಸರ ಜೋರು ಬಾಯಿಗಳು ತೆರೆದುಕೊಳ್ಳುತ್ತವೆ. ಮನೆ ಹಿತ್ತಲೇ ಪ್ರಶಸ್ತವೆಂದು ಹಿಂಬಾಗಿಲಿನಿಂದ ಹೊರಬಂದು ಜಗಳವಾಡುವ ಹೆಂಗಸರ ಈ ಸಮರ



ಒಂದು ಹೆಜ್ಜೆ ಮುಂದೆ ಹೋಯಿತೋ.. ಗದ್ದೆಯ ಬಯಲಿಗೆ ಬಿದ್ದು ಬೈದಾಡಿಕೊಳ್ಳುತ್ತಾರೆ. ಯಾರದೋ ಮನೆಯ ಕೋಳಿಹ್ಯಾಟೆ ಬೆಳಿಗ್ಗೆ ಗೂಡಿಂದ ಹೊರ ಹೋದದ್ದು ರಾತ್ರಿ ಮರಳಿ ಬರದೇ ಇದ್ದಾಗಲೋ, ಯಾರದೋ ದನ ಬಂದು ಇನ್ಯಾರದೊ ಅವರೇಬಳ್ಳಿ ಮೆಂದುಹೋದದ್ದೋ, ಒಂದು ಪ್ರಸಂಗ ನಡೆಯಲಿಕ್ಕೆ ಸಾಕಾಗುತ್ತದೆ.

ಮೊನ್ನೆ ಮೊನ್ನೆ ನಡೆದ ಸೇಮುನ ಕೋಳಿ ಕಾಣೆಯಾದ ಪ್ರಸಂಗ ಇವತ್ತಿಗೂ ಜನರ ಬಾಯಲ್ಲಿ ಸವೆದು ಹೋಗುತ್ತಿದೆ. ಅದು ಜಿಟಿಜಿಟಿ ಮಳೆಗಾಲ. ಕೋಳಿಗೂಡಿನ ಬಾಗಿಲು ಹಾಕಲು ಆ ದಿನ ಮರೆತು ಹೋಗಿತ್ತು ಸೇಮುಗೆ. ಹಾಸಿಗೆಗೆ ತಲೆಕೊಡುವಾಗ ಥಟ್ಟಂತ ನೆನಪಾಗಿ ಗಂಡನಿಗೆ ಕೋಳಿಗೂಡು ಮುಚ್ಚಿ ಬರುವಂತೆ ಹೇಳಿದಳು. 'ಬೋನಾನೆ ಹರ್ಕಂಡಿ ಬಿದ್ದಂಗ್ಗೆ ಮಳೀ ಹ್ವೊಯ್ತಿದು. ಈಗ ಕೋಳಿಗೂಡು ಹಾಕಂತಿದು. ಬೇಕರೇ ನೀನೇ ಹಾಕು!' ಎಂದ್ದೇಳಿ ಗಂಡ ಮುಸುಕು ಹಾಕಿ ಮಲಗಿಬಿಟ್ಟ. ಆಕೆಗೂ ಹೊರ ಹೋಗಲು ಮನಸ್ಸಾಗಲಿಲ್ಲ. ಆದರೆ ಮರುದಿನ ಸೇಮುನ ಹ್ಯಾಟೆಯೊಂದು ನಾಪತ್ತೆಯಾಗಿತ್ತು. ಮರುದಿನ ಬೆಳಿಗ್ಗೆ ಕೋಳಿ ಕಳೆದುಕೊಂಡ ಸೇಮು ಹಳಹಳಿಸುತ್ತಾ ಆಡಿದ ಒಂದೊಂದು ಮಾತು ಪಡ್ಡೆ ಹುಡುಗರ ಬಾಯಲ್ಲಿ ವಾರಗಟ್ಟಲೆ ನಲಿದಾಡಿದ್ದೇ ಆಡಿದ್ದು. 'ನಮ್ಮಪ್ಪನ ಮನಿಲೀಂದಿ ಈ ವರ್ಷಕ್ಕೆ ದ್ಯಾವ್ರಿಗೆ ಬಿಡುಕಂತೇ ತಕಂಡ ಬಂದಿತೇ.. ಇವ್ರ ಮನೀ ಕಳುವಾಗುಕೇ.. ಇವ್ರ ಕೊಟ್ಗೆ ಹಾಳಬೀಳುಕೆ.. ಕೋಳಿ ಸಾಕುಕೇ ಧಾಡಿ ಇವ್ರಗೆ! ನಾಮು ಸಾಕುದೇ ಇವ್ರಗೆ ಅಂತ್ಕಂಡಿರೇ.. ಮೂರೂರ ಸೂಳಿ.. ಮೂರುಮೂರು ಹಿಣ್ಣ ಹಿತ್ತಿದು. ಅವ್ನೇ ಕಡ್ಕಂಡಿ ತಿಂಬುದಲ್ವೇ, ನಮ್ಮನೀ ಹ್ಯಾಟಿನೇ ಬೇಕಾತೀದೇ, ಕಳ್ಳಬ್ಯಾವರ್ಸಿಗೀ' ಎನ್ನುತ್ತ ಸೇಮಕ್ಕ ಬಾಯಿ ಎತ್ತುತ್ತಲೇ ಪಕ್ಕದ ಮನೆಯ ಮೂರು ಹೆಣ್ಣುಮಕ್ಕಳ ತಾಯಿ ಮಾದೇವಿಗೆ ಗುಂಡು ಹೊಡೆದಂಗಾಗಿತ್ತು. ಇದು ತನಗೇ ಹೇಳಿದ್ದೆಂದು ನೂರಕ್ಕೆ ನೂರು ಖಾತ್ರಿಯಾಗಿತ್ತು ಆಕೆಗೆ. ಉಟ್ಟ ಸೀರೆ ತೊಡೆವರೆಗೆ ಏರಿಸಿಕೊಂಡು ಬಂದ ಆಕೆ ಸೇಮಕ್ಕನ ಮನೆಯ ದಣಪೆಯಲ್ಲಿ ನಿಂತು, 'ಯಾರಿಗೇ ಹೇಳುದು ನೀನು? ಅಂಬಲಿ ಕುಡಿಯೋಳು ಬೆಳ್ತಗಕ್ಕಿ ಉಂಡೋಳಿಗೆ ಹೇಳುದು ನೋಡು..ಮರ್ರ್ಯಾಸಿನ ನಿನ್ನ ಕೋಳಿ ನನ್ನ ಸಾಂಟಕೆ ಸಮ. ಊರೋರ ಮೊಗ್ಗಿಕಾಯಿ, ಹಲಿಸಿನ ಕಾಯಿ ಕದ್ಕಂಡಿ ಬದ್ಕು ನೀನು ನನ್ನ ಮ್ಯಾನೆ ಆಪಾದ್ನೇ ಮಾಡ್ತಿ..' ಎಂದು ಹೂಂಕರಿಸತೊಡಗಿದಳು. ಇದು ಈಗಷ್ಟೇ ಬಾಯಿ ಮಾಡಿ ಒಳಗೆ ಹೋಗಿ ಮಸಾಲೆ ಅರೆಯಲು ಕಲ್ಲು ತೊಳೆಯುತ್ತಿದ್ದ ಸೇಮು ಕಿವಿಗೆ ಬಿದ್ದಿತು. ಸೇಮುಗೆ ಇನ್ನು ಪಿತ್ತ ನೆತ್ತಿಗೇರಿದ್ದು ಇಳಿದಿರಲಿಲ್ಲ. 'ಹೌದೇ ಹೇಳ್ತಿ ನಾನು, ನಿಮ್ಮನೀಲಿ ನಿನ್ನಗೀ ಗರಂ ಮಾಸಾಲಿ ವಾಸ್ನಿ ಹ್ಯಾಂಗ ಬತ್ತಿತ್ತು ಮತ್ತೆ? ನಮ್ಮನಿ ಕೋಳಿ ತಿಂದ್ರೆ ಹುಲಿಜಟ್ಟಿಗ ದ್ಯಾವ್ರು ನಿನ್ನ ಕೊಟ್ಟಿಗೆನೆ ನಾಶ ಮಾಡ್ತಾನ್ಯೇ ನೋಡು' ಎಂದು ಶಾಪ ಹಾಕುತ್ತಾ ಹೊರಬಂದಳು. ಕೋಳಿ ಕಬ್ಬೆಕ್ಕಿಗೆ ಬಲಿಯಾಗಿದ್ದಿತೋ, ನರಿ ಬಾಯಿ ಸೇರಿತ್ತೋ ತಿಳಿಯದು; ಆದರೆ ಕೋಳಿ ಕದಿಯದ ಮಾದೇವಿ ಈಗ